ತುಮಕೂರು ಡಿಸ್ಟ್ರಿಕ್ಟ್.

ತಾರೀಖು 24ನೇ ಜನವರೀ 1887.

ಇವರಿಂದ ಸಮ್ಮಂಧಪಟ್ಟ ಜನಗಳಿಗೆ ತಿಳಿಯಪಡಿಸುವದೇನಂದರೆ.—ತಿಪಟೂರು ಸಬ್ ರಿಜಿಸ್ಟ್ರಾರ್ ಆಫೀಸಿನಲ್ಲಿ ಬೇವಾರಸಾಗಿರತಕ್ಕ ಈ ಕೆಳಗೆ ವಿವರಿಸೋಣಾಗಿರುವ ದಸ್ತಾವೇಜನ್ನ ಹಾಜರ್ ಮಾಡಿದವರೇ ಆಗಲಿ ಅಥವಾ ಅವರಿಂದ ಕ್ರಮವಾಗಿ ಅಧಿಕಾರ ಹೊಂದಿದ ಮುತಾಲೀಕರು ಯಾ ಹಕ್ಕುದಾರರೇ ಆಗಲಿ ಈ ನೋಟೀಸ್ ತಾರೀಖು ಲಾಗಾಯತು ಎಂದು ತಿಂಗಳೊಳಗಾಗಿ ತಿಪಟೂರು ಸಬ್ ರಿಜಿಸ್ಟ್ರಾರ್‌ರಲ್ಲಿ ಹಾಜರಾಗಿ ಸದರೀ ದಸ್ತಾವೇಜನ್ನು ವಾಪಸ್ ಪಡಿಯಲು ತಪ್ಪಿದರೆ 1877ನೇ ಇಸವಿ 3ನೇ ನಂಬರ್ ಇಂಡಿಯನ್ ರಿಜಿಸ್ಟ್ರೇಷನ್ ಆಕ್ಟಿನ 85ನೇ ಸೆಕ್ಷನ್ ಅನುಸರಿಸಿ ನಾಶಮಾಡಲ್ಪಡುವದು.

ದಸ್ತಾವೇಜಿನ ನಂಬರ್.	ದಸ್ತಾವೇಜಿನ ತಾರೀಖು.	ದಸ್ತಾವೇಜು ರಿಜಿಸ್ಟ್ರಿಗೆ ಹಾಜರಾದ ತಾರೀಖು.	ದಸ್ತಾವೇಜು ರಿಜಿಸ್ಟ್ರಾದ ತಾರೀಖು.	ದಸ್ತಾವೇಜು ಬರದು ಕೊಟ್ಟವರ ಹೆಸರು ಮತ್ತು ವಾಸಸ್ಥಳ.	ದಸ್ತಾವೇಜನ್ನ ಬರೆಸಿಕೊಂಡವರ ಹೆಸರು ಮತ್ತು ವಾಸಸ್ಥಳ.	ದಸ್ತಾವೇಜಿನ ಸ್ವಭಾವ ಮತ್ತು ಕಿಮ್ಮತ್ತು.
336 1884—85	25—12—84	29—12—84	30—12—84	ತಿಪಟೂರು ತಾಲ್ಲೂಕು ನೋಣವಿನಕೆ ರೆಗ್ಯಾಮದಲ್ಲಿ ಇರುವ ಬಾಣಾವರ ತಾಲ್ಲೂಕು ಲೇಟ್ ಜುಡಿಷಿಯಲ್ ಗವಾಸ್ತೆ ಕಡಬದಕೂಗಿ ಮೇಡು ನರಸುಹ್ಯಾಚಾರ್ಯಮಕ್ಕಳು ಗೋಪಾಲಯ್ಯಂಗಾರ್ರ ಹೆಂಡತಿ ಸೀತಮ್ಮ	ತಿಪಟೂರು ತಾಲ್ಲೂಕು ನೋಣವಿನಕೆರೆ ವಾಸಸ್ಥ ಕಂಭಂ ಅಳಿಂಗರು ಚಾರ್ಯರವರ ಮಕ್ಕಳು ಗರುಡಾಚಾರ್ರು	ಸದರೀ ನೋಣವಿನಕೆರೆ ಗ್ರಾಮದಲ್ಲಿ ಇರುವ ಮನೆ 1ಕ್ಕೆ ಪಕ್ಕ ಬಂದಿ ಪೂರ್ವಕ್ಕೆ ನಗರದ ಕೃಷ್ಣಯ್ಯಂಗಾರ್ರ ಮನೆ, ಪಶ್ಚಿಮಕ್ಕೆ ಲಕ್ಷ್ಮಿನಾರಣಪ್ಪನವರ ಮನೆ ಮಗ್ಗಲು ವೋಣಿ, ದಕ್ಷಿಣಕ್ಕೆ ರಾಜಬೀದಿ, ಉತ್ತರಕ್ಕೆ ಅಂಬೇ ತಿರುಮಲ್ಲಯ್ಯನವರ ಮಾಳು ನಿವೇಶನದ ಮಗ್ಗಲು ವೋಣಿ, ಪೂರ್ವ ಪಶ್ಚಿಮ ಗಜ 18½ ಉತ್ತರ ದಕ್ಷಿಣ ಗಜ 18 ಹೆಂಚಿನ ಮನೆ ಇದಕ್ಕೆ ಕೇದ ಹಿತ್ತಲು ಮತ್ತು ನಿವೇಶನ ಸಹ (300) ರೂಪಾಯಿಗಳಿಗೆ ಖರೀದಿ ಗೆಕೊಟ್ಟು ಯಿರುವದಾಗಿ ವಗೈರೆ.

ಪಿ. ಯರ್. ಕೃಷ್ಣಮೂರ್ತಿ,
ರಿಜಿಸ್ಟ್ರಾರ್.

ಮೈಸೂರು ಡಿಸ್ಟ್ರಿಕ್ಟ್.

ಮೈಸೂರು ಡಿಸ್ಟ್ರಿಕ್ಟ್ ಜಡ್ಜಿಯವರ ಕೋರ್ಟಿನಲ್ಲಿ.

1887ನೇ ಇಸವಿ ಆರ್ಜೀ ನಂಬರ್ 5.

ಮೃತಪಟ್ಟ ಲಕ್ಷ್ಮೀದೇವಮ್ಮನವರ ಆಸ್ತಿ ವಿಷಯದಲ್ಲಿ.—

ಅರ್ಜೀದಾರ ನರಸಿಹ್ಮಭಟ್ಟರು ಮೃತಪಟ್ಟ ಸದರೀ ಲಕ್ಷ್ಮೀದೇವಮ್ಮನವರಿಗೆ ಮಗ ಆಗಬೇಕಿಂಬ ಹಕ್ಕುದಾರೀಮೇಲೆ ಮಂಜರಾಬಾದ್ ತಾಲ್ಲೂಕು ಯಳೂರು ಹೋಬಳಿ ಕೊಂತ್ಲಾ ಪುರದ ಸ್ಥಳದ ಸದರೀ ನರಸಿಹ್ಮಭಟ್ಟರು ಡಿಫೋ ವಾಸಸ್ಥಳಾಗಿ ಮೃತಪಟ್ಟ ಲಕ್ಷ್ಮೀದೇವಮ್ಮನವರ ಜಿಂದಗಿ ಬಗ್ಯಾಗಿ ಬರತಕ್ಕ 400 ರೂಪಾಯಿಗಳ ಸಾಲವನ್ನು ವಸೂಲ್ ಮಾಡಿಕೊಳ್ಳುವದಕ್ಕೆ 1860ನೇ ಇಸವಿ 27ನೇ ಆಕ್ಟ್ಟು ಮೇರಿಗೆ ಸರಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ವರಖಾಸ್ತದಾರರಾದ ನರಸಿಹ್ಮಭಟ್ಟರ ಅರ್ಜೀಯನ್ನು 1887ನೇ ಇಸವಿ ಫಿಬ್ರವರೀ ತಿಂಗಳು ತಾರೀಖು 15ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಬ್ತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಲಕ್ಷ್ಮೀದೇವಮ್ಮನವರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

1887ನೇ ಇಸವಿ ಜನವರೀ ತಿಂಗಳು 11ನೇ ತಾರೀಖಿನಲ್ಲಿ ಕೋರ್ಟು ಮೊಹರಿನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.